ಶ್ರೀ ಜಗದೀಶ ಶೆಟ್ಟರ್:– ಸರ್ಕಾರದ ನೀತಿ ಏನು ಎಂಬುದನ್ನು ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಸ್ಪಷ್ಟವಾಗಿ ಹೇಳಿದ್ದೇನೆ. ಸರ್ಕಾರದ ನಿಲುವು ಕೂಡ ಅದನ್ನು ನಿಲ್ಲಿಸಬೇಕೆನ್ನುವ ದೃಷ್ಟಿಯಿಂದಲೇ ನಿಲ್ಲಿಸಿದ್ದೇವೆ. ಆದರೆ ಈಗಾಗಲೇ ಮಂಗಳೂರು ಮತ್ತು ಹುಬ್ಬಳ್ಳಿ–ಧಾರವಾಡದಲ್ಲಿ ಏನು ಕೊಟ್ಟಿದ್ದಾರೋ ಅದನ್ನು ನಿಲ್ಲಿಸಲಾಗುವುದಿಲ್ಲವೆಂದು ಕಾನೂನು ಇಲಾಖೆಯವರೇ ಹೇಳಿದ್ದಾರೆ. ಅಷ್ಟು ಬಿಟ್ಟು ಉಳಿದಿದ್ದನ್ನೆಲ್ಲಾ ನಾವು ನಿಲ್ಲಿಸಿದ್ದೇವೆ.

ಶ್ರೀ ಜಗದೀಶ ಶೆಟ್ಟರ್:– ನೋಟಿಫಿಕೇಷನ್ ಬಗ್ಗೆ ಹೇಳಲಿಲ್ಲ.....

ಅಧ್ಯಕ್ಷರು:– ಮಾನ್ಯ ಶೆಟ್ಟರ್‌ರವರೆ, ಚರ್ಚೆನೋ ಅಥವಾ ಪ್ರಶ್ನೋತ್ತರ ವೇಳೆಯೋ ನೀವು ಹೇಳಿದ್ದೆಲ್ಲಾ ಕ್ಲಿಯರ್ ಮಾಡಬೇಕಾದರೆ ಅರ್ಧ ಗಂಟೆ ಬೇಕಾಗುತ್ತದೆ. ಹಿರಿಯ ನಾಯಕರಾಗಿ, ನೀವು ಅನೇಕ ಉಪ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ 20 ನಿಮಿಷವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:– ನಾನು ಬೇರೆ ರೀತಿಯಲ್ಲಿ ಚರ್ಚೆನೂ ಮಾಡಿಲ್ಲ. ನಾನು ಆಕ್ಚ್ಯುಯಲ್ ಪಾಯಿಂಟ್‌ಗೆ ಬರುತ್ತಿದ್ದೇನೆ. ಅದು ಪಾಲಿಸಿ ಮ್ಯಾಟರ್ ಅವರು ಸ್ಪಷ್ಟೀಕರಣ ಮಾಡಲಿಲ್ಲ.

ಕಬಿನಿ ಏತ ನೀರಾವರಿ ಯೋಜನೆ

214 (2243) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ):– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಏತ ನೀರಾವರಿ ಯೋಜನೆಯ ಸರ್ವೆ ಕಾರ್ಯ ಅಂತಿಮಗೊಳಿಸಲು ತೆಗೆದುಕೊಂಡಿರುವ ಕಾಲಮಾನವೆಷ್ಟು;

ಆ) ಈ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕಬಿನಿ ಏತ ನೀರಾವರಿ ಯೋಜನೆಯ ನಾಲಾಪಥದ ಸರ್ವೆ ಕಾರ್ಯವನ್ನು ಮೆ: ಅಮಿನಭಾವಿ ಮತ್ತು ಹೆಗಡೆ ಧಾರವಾಡ ರವರಿಗೆ 2001–2002ನೇ ಸಾಲಿನಲ್ಲಿ ವಹಿಸಲಾಗಿದ್ದು, ಈ ಕಾಮಗಾರಿಯು ಇನ್ನೂ ಪ್ರಗತಿಯಲ್ಲಿದ್ದು ಇದನ್ನು ಜೂನ್–2005 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದೆ. ಯೋಜನೆಯ ಕಮಾಂಡ್ ಏರಿಯಾ ಸರ್ವೆ ಕಾರ್ಯವನ್ನು ಮೆ: ಎಸ್. ಅಂಡ್ ಎಂ. ಅಸೋಸಿಯೇಟ್ಸ್, ಬೆಂಗಳೂರು ರವರಿಗೆ 2004–2005ನೇ ಸಾಲಿನಲ್ಲಿ ವಹಿಸಲಾಗಿದ್ದು ಇದನ್ನು ಕ್ರಮವಾಗಿ ಮಾರ್ಚ್ ಹಾಗೂ ಜೂನ್ ತಿಂಗಳಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ) ಈ ಯೋಜನೆಯ ಸರ್ವೆ ಕಾರ್ಯ ಇನ್ನೂ ಪ್ರಗತಿ–ಯಲ್ಲಿರುವುದರಿಂದ ಸರ್ವೆ ಕಾರ್ಯ ಪೂರ್ಣಗೊಂಡ ನಂತರ ಯೋಜನೆ ಸಿದ್ಧಪಡಿಸಬೇಕಾಗಿದೆ. ಆದ್ದರಿಂದ ಈ ಹಂತದಲ್ಲಿ

ಯೋಜನೆಗೆ ಹಣ ಬಿಡುಗಡೆ ಮಾಡುವ ಪ್ರಸ್ತಾವನೆಯು ಉದ್ಭವಿಸುವುದಿಲ್ಲ. ಯೋಜನೆ ಸರ್ವೆ ಕಾರ್ಯಕ್ಕೆ 2004–2005ನೇ ಸಾಲಿನಲ್ಲಿ ರೂ. 4.93 ಲಕ್ಷಗಳು ಬಿಡುಗಡೆಯಾಗಿದ್ದು ವೆಚ್ಚವಾಗಿರುತ್ತದೆ.

ಶ್ರೀ ಆರ್. ಧ್ರುವನಾರಾಯಣ:– ಮಾನ್ಯ ಅಧ್ಯಕ್ಷರೆ, 1987ರಲ್ಲಿ ಕಬಿನಿ ಏತ ನೀರಾವರಿ ಯೋಜನೆಗೆ ದಿವಂಗತ ರಾಮಕೃಷ್ಣ ಹೆಗ್ಡೆಯವರು ಗುದ್ದಲ್ಲಿ ಪೂಜೆಯನ್ನು ಮಾಡಿದರು. ಅವತ್ತಿನಿಂದ ಇವತ್ತಿನವರೆಗೆ ಸುಮಾರು 17 ವರ್ಷಗಳಾದರೂ ಇನ್ನು ಕೂಡ ಸರ್ವೆ ಕೆಲಸ ಮಂದಗತಿಯಲ್ಲಿ ಸಾಗುತ್ತಿದೆ. ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಸರ್ವೆ ಕಾರ್ಯವನ್ನು ಬೇಗ ಶೀಘ್ರವಾಗಿ ಮುಗಿಸಿ ಕಾಮಗಾರಿ ಕೆಲಸವನ್ನು ಬೇಗ ಕೈಗೆತ್ತಿಕೊಳ್ಳಬೇಕು. ಏಕೆಂದರೆ 1, 23, 347 ಎಕರೆ ಪ್ರದೇಶಕ್ಕೆ ನೀರಾವರಿಯಾಗುವಂತಹ ಮಹತ್ತರವಾದ ಯೋಜನೆ. ಇದು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸೇರಿದ ಎಲ್ಲಾ ರೈತರಿಗೂ ಅನುಕೂಲವಾಗುವಂತಹದು. 17 ವರ್ಷಗಳಿಂದಲೂ ನಮ್ಮ ರೈತರು ಇದನ್ನು ಕನಸಾಗಿಯೇ ಕಾಣುತ್ತಿದ್ದಾರೆ. ಇದು ನೀರಾವರಿಯಾಗಬೇಕೆನ್ನುವುದು ಎಲ್ಲರ ಆಸೆಯಾಗಿದೆ. ಮಾನ್ಯ ಸಚಿವರು ದಯಮಾಡಿ ಸರ್ವೆ ಕಾರ್ಯವನ್ನು ಆದಷ್ಟು ಶೀಘ್ರವಾಗಿ ಮುಗಿಸಿ ಕಾಮಗಾರಿಗೆ ಚಾಲನೆಕೊಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಅರ್ಥವಿದೆ. ನೂರು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳಿಗೆ ಪ್ರಾರಂಭವಾದ ಈ ಯೋಜನೆ, ಹಂತ ಹಂತವಾಗಿ ವೆಚ್ಚ ಹೆಚ್ಚುತ್ತಾ ಹೋಗಿದೆ. 2003–2004ರ ಪ್ರಕಾರ ಎರಡನೆಯ ಹಂತದ ಎಸ್ಟಿಮೇಟ್ 1233 ಕೋಟಿ ರೂಪಾಯಿಯಾಗಿದೆ. ಅದರಲ್ಲಿ ಈಗಾಗಲೇ 271 ಕಿಲೋಮೀಟರ್ ಉದ್ದದ ಈ ಕಬಿನಿ ಏತ ನೀರಾವರಿ ನಾಲೆ ಈಗಾಗಲೇ 232 ಕಿಲೋಮೀಟರ್ ಬಿದರಹಳ್ಳಿ ಶಾಖಾನಾಲೆ ಮತ್ತು 24 ಕಿಲೋಮೀಟರ್ ಅಂತರಸಂತೆ, ಇವೆರಡು ಅದರ ಸರ್ವೆ ನಡೆದಿದೆ. ಇದರಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಸರ್ವೆ ಕೆಲಸವನ್ನು ಕೂಡ ಮುಗಿಸಿ ಸಾಕಷ್ಟು ಅದಕ್ಕೇನು ಹಣಬೇಕಾಗಿತ್ತೋ ಅದನ್ನು ಕೂಡ ಕೊಟ್ಟಿದ್ದೇವೆ. ಇದು ಮುಗಿದ ತಕ್ಷಣ ಉಳಿದ ಕಾರ್ಯಕ್ರಮವನ್ನು ಜರುಗಿಸುತ್ತೇವೆ. ಮತ್ತೆ ಅವರ ಅನಿಸಿಕೆಯ ಪ್ರಕಾರ ಎಷ್ಟು ಬೇಗ ಪ್ರಾರಂಭ ಮಾಡಬೇಕೋ ಅಷ್ಟು ಬೇಗ ಇದನ್ನು ಪ್ರಾರಂಭ ಮಾಡಿಸಿಕೊಡ್ತೇವೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮಂತ್ರಿಗಳು ತಾವು ಕಾಲುವೆ ವಿಚಾರವನ್ನು ಹೇಳುತ್ತಿದ್ದೀರಿ. ಕಬಿನಿ ಎರಡನೇ ಹಂತ 23 ವರ್ಷಗಳ ಹಿಂದಿನದು. ಇದು ನಂಜನಗೂಡು, ಚಾಮರಾಜನಗರ, ಸಂತೇಮಾರನಹಳ್ಳಿ ಈ ಪ್ರದೇಶದ ಒಂದೂವರೆ ಲಕ್ಷ ಎಕರೆ ಭೂಮಿ ನೀರಾವರಿಯಾಗುವುದು. ಆಗಿನ ಮುಖ್ಯಮಂತ್ರಿಗಳಾದ ದಿವಂಗತ ರಾಮಕೃಷ್ಣ ಹೆಗ್ಡೆಯವರು ಶಂಕುಸ್ಥಾಪನೆ ಮಾಡಿದರು. ಅದಾದ ಮೇಲೆ ಒಂದು ಸಣ್ಣ ಕೆಲಸವೂ ಆರಂಭವಾಗಿಲ್ಲ. ಅದುದರಿಂದ ಕಬಿನಿ ಎರಡನೇ ಹಂತವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಈಗಾಗಲೇ ಮಾನ್ಯ ಸದಸ್ಯರು ಕೇಳಿದ್ದು ಕಬಿನಿ ಎರಡನೇ ಹಂತಕ್ಕೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಕೇಳಿದ್ದು, ಅವರಿಗೂ ನಿಮಗೂ ಅನುಕೂಲವಾಗುತ್ತದೆ. ಅದರ ಎಷ್ಟಿಮೇಟ್ 1233 ಕೋಟಿ ರೂಪಾಯಿಗಳು. ದಿವಂಗತ ರಾಮಕೃಷ್ಣ ಹೆಗ್ಡೆಯವರ ಕಾಲದಲ್ಲಿ ಶಂಕುಸ್ಥಾಪನೆಯಾಗಿದ್ದು ನಿಜ. ಅದರೆ ಮೊದಲನೇ ಹಂತ ಮುಗಿಯಿತು. ಎರಡನೇ ಹಂತರ ಕೆಲಸ ಆಗಿಲ್ಲ. ಆ ಎರಡನೇ ಹಂತದ ಕೆಲಸಕ್ಕೆ ಅವರು ಶಂಕುಸ್ಥಾಪನೆ ಹಾಕಿದ್ದು. 271 ಕಿಲೋಮೀಟರ್ ಉದ್ದದ ಕಾಲುವೆ ಏನಿದೆ ಇದರ ಸರ್ವೆಯನ್ನು ಒಂದು ಪ್ರೈವೇಟ್ ಏಜೆನ್ಸಿಗೆ ಸಂಪೂರ್ಣವಾಗಿ ಕೊಟ್ಟಿದ್ದೇವೆ. ಅದನ್ನು ಮಾಡುತ್ತಿದ್ದಾರೆ. ಸರ್ವೆ ಕೆಲಸ ಮುಗಿದ ತಕ್ಷಣ ಮುಂದಿನ ಕಾರ್ಯಕ್ರಮವನ್ನು ನಾವು ಜರುಗಿಸುತ್ತೇವೆನ್ನುವ ಮಾತನ್ನು ನಾನು ಸ್ಪಷ್ಟಪಡಿಸಿದ್ದೇನೆ.

ಶ್ರೀ ಆರ್. ಧ್ರುವನಾರಾಯಣ:– ಒಂದೇ ಒಂದು ಉಪ ಪ್ರಶ್ನೆ. ಇದರ ಒಟ್ಟು ಸರ್ವೆ ಆಗಿರುವುದು 278 ಕಿಲೋಮೀಟರ್ ಇದುವರೆಗೆ ಆಗಿರತಕ್ಕದ್ದು. 128 ಕಿಲೋಮೀಟರ್, ಆದುದರಿಂದ ಈ ಸರ್ವೆಗೆ ನೀವು ಗಡುವು ಕೊಡಬೇಕು. ಇಂತಿಷ್ಟು ಕಾಲವೆಂದು ನಿಗದಿ ಮಾಡಿ ಸರ್ವೆ ಕಾರ್ಯವನ್ನು ಅತಿ ಶೀಘ್ರದಲ್ಲೇ ಮುಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಈಗಾಗಲೇ ಈ ಸರ್ವೆ ಕೆಲಸಕ್ಕಾಗಿ ಸುಮಾರು 41 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಟೆಂಡರ್ ಮುಖಾಂತರ ಇದನ್ನು ಕೊಟ್ಟಿದ್ದು, ಆದಷ್ಟು ಬೇಗನೆ ಇದನ್ನು ಮಾಡುತ್ತೇವೆ.

ಶ್ರೀನಿವಾಸಪುರ ತಾಲ್ಲೂಕು ಜಾಲಗೊಂಡ್ಲಹಳ್ಳಿ ನೀರಾವರಿ ಯೋಜನೆ

215 (3097) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ): ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀನಿವಾಸಪುರ ತಾಲ್ಲೂಕಿನ ಜಲಗೊಂಡನಹಳ್ಳಿ ನೀರಾವರಿ ಯೋಜನೆಯ ಮೂಲ ಅಂದಾಜು ಅಚ್ಚುಕಟ್ಟು ಎಷ್ಟಿತ್ತು;

ಆ) ಈಗ ಕೆಲಸ ಮಾಡಿರುವ ಪ್ರಕಾರ ಎಷ್ಟು ಅಚ್ಚುಕಟ್ಟು ಸಿಕ್ಕಲಿದೆ;

ಇ) ಸುಮಾರು 480 ಎಕರೆಗೆ ಆಗುವ ನೀರು ಲಭ್ಯವಿರುವುದು ನಿಜವೆ;

ಈ) ಹಾಗಿದ್ದಲ್ಲಿ, 480 ಎಕರೆಗೆ ನೀರು ಒದಗಿಸಲು ಇಡೀ ಯೋಜನೆಯನ್ನು ಪುನರ್ ನಿರ್ಮಿಸಲಾಗುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 175 ಎಕರೆ

ಆ) 445 ಎಕರೆ

ಇ) ಹೌದು

ಈ) ಇಲ್ಲ.